ದಿ: 07-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀಮತಿ ವಕೀಲರಿಂದ ಪ್ರತಿವಾದಿಯ ಪರವಾಗಿ**

2010 ರಿಂದ ವಾದಿ ಬ್ಯಾಂಕ್ ನಲ್ಲಿ ಯಾರು ಯಾರು ಮ್ಯಾನೇಜರ್ ಆಗಿದ್ದರು ಅಂತ ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿಯು ನಮ್ಮ ಬ್ಯಾಂಕ್ ಗೆ ದಿಃ 18-06-2020 ರಂದು ಸಾಲಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅದೇ ದಿನ ಪ್ರತಿವಾದಿಗೆ ಸಾಲ ಮಂಜೂರಾಗಿರುತ್ತದೆ. ಸಾಮಾನ್ಯವಾಗಿ ಸಾಲದ ಅರ್ಜಿಯನ್ನು ಬ್ಯಾಂಕ್ ನ ಸಭೆ ಇದ್ದಾಗ ಆ ಅರ್ಜಿ ಬಗ್ಗೆ ಚರ್ಚೆ ಮಾಡಿ ನಂತರ ಮಂಜೂರು ಮಾಡಲಾಗುತ್ತದೆ ಅಂದರೆ ಮ್ಯಾನೇಜರ್ ರವರಿಗೆ ಅಧಿಕಾರ ಇರುವುದರಿಂದ ಅವರೇ ಸಾಲವನ್ನು ಮಂಜೂರು ಮಾಡುತ್ತಾರೆ. ಅದೇ ದಿನ ಪ್ರತಿವಾದಿ ಖಾತೆಗೆ ಸಾಲ ಜಮಾ ಆಗಿದೆ. ಅದರ ಬಾಬ್ತು ನಾನು Sanction Memorandum ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಪಿ-1 ರ ದಾಖಲೆಯನ್ನು ಯಾರು ತುಂಬಿದ್ದಾರೆ ಅಂತ ನನಗೆ ಗೊತ್ತಿಲ್ಲ, ಆ ಸಮಯದಲ್ಲಿ ನಾನು ಮ್ಯಾನೇಜರ್ ಆಗಿರಲಿಲ್ಲ. ನಿಪಿ-1 ರಲ್ಲಿ ಇರುವಂತಹ ಸಹಿಮತ್ತು ಆ ಅರ್ಜಿಯಲ್ಲಿ ಕಾಣಿಸಿರುವ ಬರವಣಿಗೆಯಲ್ಲಿ ವ್ಯತ್ಯಾಸ ಇರುತ್ತದೆ ಅಂದರೆ ಅದು ನನಗೆ ಗೊತ್ತಾಗುತ್ತಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಅದು ಪ್ರತಿವಾದಿ ಯಾರ ಹತ್ತಿರ ಬರೆಸಿದ್ದಾರೆ ಅಂತ ನನಗೆ ಗೊತ್ತಿಲ್ಲ.

ಯಾವುದೇ ಸಾಲದ ಖಾತೆಯನ್ನು ಓ.ಡಿ. ಮಾಡಬೇಕಾದರೆ ಅವರ ವ್ಯವಹಾರವನ್ನು ನೋಡಿಯೇ ಮಾಡುತ್ತೇವೆ ಅಂದರೆ ಸುಳ್ಳು. ಅವರ ವ್ಯವಹಾರ ಯಾವ ತರಹ ಇರುವ ಬಗ್ಗೆ ವಿಚಾರಣೆ ಮಾಡಿ ಓ.ಡಿ. ಮಾಡುತ್ತೇವೆ. ಕೃಷ್ಣ ನಾಯ್ಕ ಎಂಬುವವರು ವಾದಿ ಬ್ಯಾಂಕ್ ನಲ್ಲಿ ಮ್ಯಾನೇಜರ್ ಆಗಿದ್ದರು ಅಂದರೆ ನನಗೆ ಗೊತ್ತಿಲ್ಲ. ಕೃಷ್ಣ ನಾಯ್ಕರವರ ಮಗ ಅಭಿಷೇಕರವರೇ ಕೆ.ಸಿ.

ಟ್ರೇಡರ್ಸ್ ನ ಮಾಲೀಕರು ಅಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯ ತಕರಾರನ್ನು ನಾನು ಓದಿ ತಿಳಿದುಕೊಂಡಿದ್ದೇನೆ.

ಪ್ರಶ್ನೆಃ ಕೆ.ಸಿ. ಟ್ರೇಡರ್ಸ್ ಮತ್ತು ಜಿ.ಎಂ.ಸಿ. ಫರ್ಮ್ ನೇದರ ಬ್ಯಾಂಕ್ ನ ವ್ಯವಹಾರದ ಬಗ್ಗೆ ಪ್ರತಿವಾದಿಯು ಮೇಲ್ವಿಚಾರಕರು ಆಗಿದ್ದರು ಅಂಂದರೆ?

ಉತ್ತರಃ ಅದರ ಬಗ್ಗೆ ನಮಗೆ ದಾಖಲೆಗಳನ್ನು ಕೊಟ್ಟಿಲ್ಲ.

ನಾನು ಈಗ ನೋಡಿದ ನಿಪಿ-2ರಲ್ಲಿ ದಿಃ 02-06-2020 ಅಂತ ಇದೆ. ವಾದಿ ಬ್ಯಾಂಕ್ ನ ವಿರುದ್ಧ PCR.162/2022 ಮತ್ತು PCR.502/2022ರಂತೆ ದಾಖಲು ಮಾಡಿದ್ದಾರೆ ಅಂದರೆ ನನಗೆ ಮಾಹಿತಿ ಇಲ್ಲ. ಆಗಿನ ವಾದಿ ಬ್ಯಾಂಕ್ ನ ಮ್ಯಾನೇಜರ್ ಈ ಸಾಲದ ಮೊತ್ತವನ್ನು ವೈಯಕ್ತಿಕವಾಗಿ ಬಳಸಿಕೊಂಡಿದ್ದಾರೆ ಅಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಗೆ ಯಾವುದೇ business ಇಲ್ಲ ಅಂದರೆ ಸುಳ್ಳು. ಸಾಕ್ಷಿದಾರರು ಹೇಳುತ್ತಾರೆ ಅವರದು Trade license ಇದೆ. ಪ್ರತಿವಾದಿಯು ವಾದಿ ಬ್ಯಾಂಕ್ ನಿಂದ ಸಾಲ ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ ಕಡೆಯಿಂದ ಮಾಡಿಸಿಕೊಂಡಿರುವಂತಹ ಸಹಿಯ ದಾಖಲೆಗಳ ಮೇಲೆ ಸಹಿ ಮಾಡಿಸಿಕೊಳ್ಳುತ್ತಿರುವಾಗ ಈ ಪ್ರಕರಣದ ದಾಖಲೆಗಳ ಮೇಲೆ ಸಹಿ ಮಾಡಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. ಪ್ರತಿವಾದಿಯು ನಮ್ಮ ಬ್ಯಾಂಕ್ ನಲ್ಲಿ ಯಾವುದೇ ವ್ಯವಹಾರ ಮಾಡಿಲ್ಲ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.